

**ಎಡದಿಂದ ಬಲಕ್ಕೆ:**

1. ಹೊಟ್ಟು ಮಾರಿ ಬದುಕಿದರೂ 'ಹಿಡಿದ ಪಟ್ಟು ಬಿಡದ ಗ್ರಾಮದೇವತೆ' (4)
3. ಜಾಗದ ಅಳತೆಯ ಬಗೆಗೆ ಭಾರೀ ವೈಮನಸ್ಯ-ಗಲಾಟೆ (3)
4. ಮಾನವ ವೇಷದ ಅತಿ ಕುಳ್ಳ ದೇವ (3)
6. ಕಬ್ಬನ್ನರೆಯುವ ಯಂತ್ರ-ಹೆದರಿಕೆ ಬರಿಸುವಂತಿದೆ (4)
8. ಪರಿಚಿತ ಬಿಡಿ-ಇದೊಂದು ಸುವಾಸನಾ ಕುಸುಮ (4)
10. ನಡುಗಲೇನು ಕಾರಣ? ಇದು ಕೇವಲ 'ಮಧ್ಯದ ಸಮಯ' (4)
12. ಖರ್ಜೂರದ ಕೆಲಸಕ್ಕೆ ಬಿಡುವಿನ ದಿನಗಳೇ ಸರಿ (4)
16. ಕಮಲವನ್ನೇರಿ ನಿಂತಿದ್ದಾಳೆ ಧನದೇವತೆ (3)
17. ನೇಮವಿರಲಿ, ನೀತಿ ಇರಲಿ ಎಂದೇ ಕೋರಿಕೆ (3)
18. ತಕರಾರಿಲ್ಲ ಬಿಡಿ, ಅದೆಲ್ಲ ಬರೀ ಕಾಯಿಪಲ್ಲೆ (4)

**ಮೇಲಿಂದ ಕೆಳಕ್ಕೆ:**

1. ಹಳ್ಳದಲ್ಲಿ ಕಂಡ ಬಣ್ಣ ಬರೀ ಅರಿಶಿನ (3)
2. ವಾಚು ರಿಪೇರಿಗೂ ಒಂದು ಸಂಪ್ರದಾಯ (3)
3. ಜೋಳದ ಕೆಲಸಕ್ಕೆ ಮೊದಲು ಸ್ನಾನ ಆಗಲಿ (3)
5. ಗಾನಲಹರಿಯಲ್ಲಿ ಮುಳುಗಿದೆ ಇಡೀ ಪಟ್ಟಣ (3)
6. ಭಜನೆಗೆ ಗುಂಪಾದವರು 'ನಿಷ್ಠಾವಂತ ಮನುಷ್ಯರು' (4)
7. ಸೋತವರನ್ನೆಲ್ಲ ತಳ್ಳಿದ್ದು-ಅದೊಂದು ಪಾತಾಳ ಲೋಕ (4)
8. ಪರಿವಾರವನ್ನಿಡೀ ಕರೆದೊಯ್ದು ತೋರಿಸಿದ್ದು ಕಡಲು (4)
9. ಪ್ರಬಲವಾಗಿದೆ ಬಿಡಿ, ತಪಸ್ಸಿನ ಶಕ್ತಿ (4)
11. ಗವಿಯಲ್ಲಿ ಕುಳಿತನೇಕೆ ಹಳ್ಳಿಯವ? (3)
13. ಜಹ್ನು ಋಷಿಯ ಮಗಳು ಗಂಗೆ ಹೇಗೆ? (3)
14. ಆತ್ಮ ವಿಕಾಸದ ಆನಂದ ಮಿತಿಯೇ ಇಲ್ಲದ್ದು (3)
15. ಮರುಕವಿರಲಿ ಹಾದಿಯಲ್ಲಿದೆ ಆಳವಾದ ಹಳ್ಳ (3)

### ಪದಬಂಧ 9-2-2012 ರ ಉತ್ತರಗಳು

**ಎಡದಿಂದ ಬಲಕ್ಕೆ:**

1. ಅಭಾವ; 3. ಪರೋಕ್ಷ; 4. ದಶಕ; 6. ಪರಿಕರ; 7. ಮಾನಧನ; 9. ನವನೀತ; 11. ಅಪಕಾರ; 15. ವಸನ; 16. ರುಧಿರ; 17. ಕಠಿಣ.

**ಮೇಲಿಂದ ಕೆಳಕ್ಕೆ:**

1. ಅಕ್ಷಮ್ಯ; 2. ವದನ; 3. ಪದಕ; 5. ಕವನ; 6. ಪತನ; 8. ನಕಾರ; 10. ನೀರವ; 12. ಪದರ; 13. ಕನಕ; 14. ವರುಣ.

# ದೈತ್ಯ-ವಿಸ್ಮಯ

## ತಿಮಿಂಗಿಲ ಎಷ್ಟು ವಿಧ? ಎಷ್ಟು ದೈತ್ಯ?

ಪ್ರಾಣಿ ಪ್ರಪಂಚದಲ್ಲಿ ಗಾತ್ರದಲ್ಲಿ, ತೂಕದಲ್ಲಿ, ಬೆಳವಣಿಗೆಯ ವೇಗದಲ್ಲಿ, ಆಹಾರ ಸೇವನಾ ಪ್ರಮಾಣದಲ್ಲಿ... ಹಾಗೆಲ್ಲ ಪ್ರತಿಯೊಂದರಲ್ಲೂ ಗರಿಷ್ಠ ಅಳತೆಯ ದಾಖಲೆಗಳನ್ನು ಸೃಷ್ಟಿಸಿರುವ ಅದ್ಭುತ ಪ್ರಾಣಿಗಳೇ ತಿಮಿಂಗಿಲಗಳು. ನಾಲ್ಕು ಕಾಲುಗಳನ್ನು ಜೋಡಿಸಿದರೂ ನೆಲದ ಮೇಲೆ ನಿಲ್ಲಲಾಗದಂತಹ, ನಡೆದಾಡಲಾಗದಂತಹ ಬೃಹತ್ ಗಾತ್ರ ಅವುಗಳದು. ಆದ್ದರಿಂದಲೇ ಶ್ರಮವಿಲ್ಲದೆ ಈಜುತ್ತ ತೇಲುತ್ತ ಇರಬಹುದೆಂದೇ ಎಲ್ಲ ತಿಮಿಂಗಿಲಗಳೂ ಕಡಲಿನಲ್ಲಿವೆ.

ಎಲ್ಲ ತಿಮಿಂಗಿಲಗಳೂ 'ಸ್ತನಿ'ಗಳು. ಸ್ತನಿ ಸಾಮ್ರಾಜ್ಯದ 'ಸಿಟೇಶಿಯನ್ಸ್' ವರ್ಗಕ್ಕೇ ಎಲ್ಲ ತಿಮಿಂಗಿಲಗಳೂ ಸೇರಿವೆ. ತಿಮಿಂಗಿಲಗಳಲ್ಲಿ ಹಲವು ಹತ್ತು ಪ್ರಭೇದಗಳಿವೆ. 'ಕಂದು ತಿಮಿಂಗಿಲ, ನೀಲಿ ತಿಮಿಂಗಿಲ, ರೈಟ್ ತಿಮಿಂಗಿಲ, ಪೈಲಟ್ ತಿಮಿಂಗಿಲ, ಹಂಪ್ ಬ್ಯಾಕ್ ತಿಮಿಂಗಿಲ, ಸ್ಪರ್ಮ್ ತಿಮಿಂಗಿಲ, ಕಿಲ್ಲರ್ ತಿಮಿಂಗಿಲ, ಬೆಲ್ಯೂಗಾ, ನಾರ್ವಾಲ್... ಇತ್ಯಾದಿ.' ತಿಮಿಂಗಿಲಗಳ ಎಲ್ಲ ಪ್ರಭೇದಗಳನ್ನೂ ಎರಡು ಗುಂಪುಗಳಲ್ಲಿ ವರ್ಗೀಕರಿಸಲಾಗಿದೆ: 'ಬಲೀನ್ ತಿಮಿಂಗಿಲಗಳು ಮತ್ತು ಹಲ್ಲಿನ ತಿಮಿಂಗಿಲಗಳು.' ಹಲ್ಲಿನ ತಿಮಿಂಗಿಲಗಳು ದೃಢವಾದ ದಂತ ಪಂಕ್ತಿಗಳನ್ನು ಪಡೆದಿವೆ. ಅವೆಲ್ಲ ಮೀನುಗಳನ್ನು, ಸ್ಕ್ವಿಡ್-ಆಕ್ಟೋಪಸ್‌ಗಳಂಥ ಮೃದ್ವಂಗಿಗಳನ್ನು ಹಿಡಿದು ತಿನ್ನುತ್ತವೆ. ಬಲೀನ್ ತಿಮಿಂಗಿಲಗಳು ಹಲ್ಲುಗಳನ್ನು ಪಡೆದಿಲ್ಲ. ಬದಲಾಗಿ ಬಾಯಿಯ ಮೇಲ್ದವಡೆಯಿಂದ, ಬಾಯಿಯಷ್ಟೂ ಅಗಲಕ್ಕೆ ಕೊಂಬಿನಂಥ ವಸ್ತುವಿನ ತೆಳ್ಳನೆಯ, ಬಳುಕುವ ಬಾಚಣಿಗೆಯಂಥ ತೆರೆಯೊಂದು ಇಳಿ ಬಿದ್ದಿರುತ್ತದೆ. ಈ ರಚನೆಗೆ 'ಬಲೀನ್' ಎಂದು ಹೆಸರು. ಬಲೀನ್ ತಿಮಿಂಗಿಲಗಳಿಗೆ ಕಡಲಿನ ಸೂಕ್ಷ್ಮ ಪ್ರಾಣಿಗಳಾದ ಪ್ಲಾಂಕ್ಟನ್‌ಗಳು ಮತ್ತು 'ಕ್ರಿಲ್'ಗಳಂಥ ಬಹು ಕುಬ್ಜ ಪ್ರಾಣಿಗಳೇ ಆಹಾರ. ಟನ್‌ಗಟ್ಟಲೆ ನೀರನ್ನು ಬಾಯಿಗೆ ತುಂಬಿಕೊಂಡು ಬಾಯನ್ನು ಮುಚ್ಚಿ ಬಲೀನ್ ಮೂಲಕ ಆ ನೀರನ್ನು ಸೋಸಿ ಹೊರ ಹರಿಸಿದಾಗ, ಬಾಯಲ್ಲೇ ಉಳಿದುಹೋಗುವ ಜೀವಿಗಳನ್ನು ಅವು ನುಂಗುತ್ತವೆ. ದೈತ್ಯ ದೇಹಿಗಳಾದ ತಿಮಿಂಗಿಲಗಳ ಪ್ರತಿ ದಿನದ ಸರಾಸರಿ ಆಹಾರದ ಅಗತ್ಯ ಒಂದು ಟನ್‌ಗಿಂತ ಹೆಚ್ಚು!



ಅತ್ಯಂತ ದೈತ್ಯ ನೆಲವಾಸಿ ಪ್ರಾಣಿಯಾದ ಆನೆಯೊಡನೆ ಹೋಲಿಸಿದರಷ್ಟೇ ತಿಮಿಂಗಿಲಗಳ ಗಾತ್ರ-ತೂಕ ಸ್ವಲ್ಪವಾದರೂ ಸ್ಪಷ್ಟ. ಏಷ್ಯಾದ ಆನೆಗಳು 2.5 ರಿಂದ 8 ಟನ್ ತೂಗುತ್ತವೆ. ಆಫ್ರಿಕಾ ಆನೆಗಳು 2.7 ರಿಂದ 12.3 ಟನ್ ತೂಗುತ್ತವೆ. ಇವಕ್ಕೆ ಹೋಲಿಸಿದಂತೆ ಕೆಲ ತಿಮಿಂಗಿಲ ಪ್ರಭೇದಗಳ ತೂಕವನ್ನು ನೀವೇ ಗಮನಿಸಿ. ಸ್ಪರ್ಮ್ ತಿಮಿಂಗಿಲದ ತೂಕ 14 ರಿಂದ 56 ಟನ್ (ಚಿತ್ರ ನೋಡಿ). ಹಂಪ್ ಬ್ಯಾಕ್ ತಿಮಿಂಗಿಲಗಳ ತೂಕ 24 ರಿಂದ 52 ಟನ್. ರೈಟ್ ತಿಮಿಂಗಿಲಗಳದು 39 ರಿಂದ 104 ಟನ್ ತೂಕ. ನೀಲಿ ತಿಮಿಂಗಿಲಗಳದು ಗರಿಷ್ಠ ಉದ್ದ-ತೂಕಗಳ ದಾಖಲೆ. 90 ರಿಂದ 187 ಟನ್ ತೂಕ ತಲುಪುವ 30 ಮೀಟರ್ (100 ಅಡಿ) ಉದ್ದ ಬೆಳೆವ ನೀಲಿ ತಿಮಿಂಗಿಲಗಳ ತೂಕ ಜನಿಸುವಾಗಲೇ ಒಂದು ಟನ್ ಇರುತ್ತದೆ! ಸ್ಪಷ್ಟವಾಗಿಯೇ ನೀಲಿ ತಿಮಿಂಗಿಲದಷ್ಟು ದೈತ್ಯ ಇಡೀ ಪ್ರಾಣಿಲೋಕದಲ್ಲೇ ಬೇರೆ ಯಾವುದೂ ಇಲ್ಲ.

■ ಎನ್. ವಾಸುದೇವ್